ಪಂಥದವರು. ಈ ಚಿಂತನೆಯ ಮೂಲ, ಏಷ್ಯಾ ಮತ್ತು ಯುರೋಪ್ ಖಂಡಗಳ ಭಾಷೆಗಳ ನಡುವೆ ಕಂಡ ಸಾಮರಸ್ಯ, ಭಾರತದ ಮೂಲ ಭಾಷೆಯಾದ ಸಂಸ್ಕೃತ ಮತ್ತು ಯುರೋಪಿನ ಮೂಲ ಭಾಷೆಯಾದ ಲ್ಯಾಟಿನ್‌ಗಳ ನಡುವೆ ಇರುವ ಹಲವಾರು ಸಮನಾರ್ಥಕ ಪದಗಳ ಹೋಲಿಕೆಯ ಆಧಾರದ ಮೇಲೆ ಅವುಗಳ ನಡುವೆ ಇರಬಹುದಾದ ಸಂಬಂಧ ಗುರುತಿಸಿ, ಅದರಿಂದ ಆ ಭಾಷೆಗಳನ್ನಾಡುತ್ತಿದ್ದ ಜನಾಂಗಗಳ ನಡುವೆಯೂ ಸಂಬಂಧ ಇತ್ತೆಂದು ಪ್ರತಿಪಾದಿಸಲಾಗಿದೆ. ಆನಂತರ ಮ್ಯಾಕ್ಸ್‌ಮುಲ್ಲರ್ ಮುಂತಾದವರು ವೇದಗಳಂತಹ ರಚನೆಗಳ ಸೃಜನಶೀಲತೆಯನ್ನು ಪ್ರಪಂಚಕ್ಕೆ ಪರಿಚಯಿಸಿದಾಗ ಅವುಗಳನ್ನು ರಚಿಸಿದವರ ಬಗ್ಗೆ ಚರ್ಚೆಗಳು ಪ್ರಾರಂಭವಾಗುತ್ತವೆ. ಸೃಜನಶೀಲತೆಯ ಶೃಂಗವನ್ನು ಪ್ರತಿಬಿಂಬಿಸುವ ಮತ್ತು ಅಂದಿನ ಸಮಾಜದ ಬೌದ್ಧಿಕ ಬೆಳವಣಿಗೆಗೆ ಸೂಚಕವಾಗಿರುವ ವೇದಗಳಂತಹ ಅಪೂರ್ವ ಗ್ರಂಥಗಳ ರಚನಕಾರರಾದ ಈ 'ಬುದ್ಧಿವಂತ' ಆರ್ಯರು ಭಾರತದವರಾಗಿರಲು ಸಾಧ್ಯವೇ ಇಲ್ಲ, ಅವರು ಮೂಲತಃ ಯುರೋಪಿನ 'ಬುದ್ಧಿವಂತ' ರಕ್ತದ ಜನರೇ ಇರಬೇಕು ಎಂದು ಅನಧಿಕೃತವಾಗಿ ವಾದಿಸಲಾಗುತ್ತದೆ. ತಮ್ಮ ಅಧೀನದಲ್ಲಿದ್ದ ಹಾಗೂ ತಮ್ಮ ಕೈಕೆಳಗೆ ಆಳಿಸಿಕೊಳ್ಳುತ್ತಿದ್ದ ಭಾರತೀಯರು ವೇದಗಳಂತಹ ಉನ್ನತ ಗ್ರಂಥಗಳನ್ನು ರಚಿಸಬಲ್ಲ ಬೌದ್ಧಿಕ ಮಟ್ಟಕ್ಕೆ ತಲುಪಿರಲು ಸಾಧ್ಯವೇ ಇಲ್ಲ ಎನ್ನುವುದು ಅವರ ದೃಢ ನಂಬಿಕೆಯಾಗಿತ್ತು. ಆ ನಂಬಿಕೆಯನ್ನೇ ಸಿದ್ಧಾಂತ ರೂಪದಲ್ಲಿ ಮಂಡಿಸಿದರು ಕೂಡ. ಬ್ರಿಟಿಷ್ ಆಡಳಿತದ ಕಾಲದಲ್ಲಿ ಹರಪ್ಪ ಮೊಹಂಜದಾರೊ ಪ್ರದೇಶಗಳಲ್ಲಿ ಉತ್ಖನನದ ಉಸ್ತುವಾರಿ ವಹಿಸಿಕೊಂಡಿದ್ದ ಕೆಲವು ಯುರೋಪಿನ ಪ್ರಾಚ್ಯ ಸಂಶೋಧಕರು ಆರ್ಯರನ್ನು ಯುರೋಪ್ ಖಂಡದ ಕಡೆಯಿಂದ ಭಾರತದತ್ತ ಕುದುರೆಗಳ ರಥಗಳಲ್ಲಿ ಯುದ್ಧೋನ್ಮುಖರಾಗಿ ವಲಸೆ ಬಂದ ಅಲೆಮಾರಿ ದಾಳಿಕೋರರೆಂದು ಬಣ್ಣಿಸಿದರು. ಸಾವಿರಾರು ಜನರ ಬೃಹತ್ ಗುಂಪುಗಳಲ್ಲಿ ಬಂದ ಈ ಆರ್ಯರ ಸಮುದಾಯಗಳು ಸ್ಥಳೀಯರ ಮೇಲೆ ಸತತವಾಗಿ ದಾಳಿ ನಡೆಸಿ ಅವರನ್ನೂ, ಅವರ ಇಡೀ ಸಂಸ್ಕೃತಿಯನ್ನೂ ನಾಶ ಮಾಡಿದರೆಂದೂ ಪ್ರತಿಪಾದಿಸಿದರು. ಅಲ್ಲದೆ ಆ ಆರ್ಯರು ಯುದ್ಧವಿದ್ಯೆಯಲ್ಲಿ ಪರಿಣತಿ ಹೊಂದಿದ್ದ 'ನಾಗರಿಕ ಜನಾಂಗ'ವಾಗಿದ್ದು, ಭಾರತದ ವಾಯವ್ಯದಲ್ಲಿ ತಮ್ಮ ಅಡಿಯೂರಿ ನೆಲೆಯಾದ ನಂತರ ವೇದಗಳ ರಚನೆಯಲ್ಲಿ ತೊಡಗಿಸಿಕೊಂಡರೆಂದೂ ಹೇಳತೊಡಗಿದರು. ಈ 'ಆರ್ಯದಾಳಿ'ಯ ಸಿದ್ಧಾಂತಕ್ಕೆ ಸೂಕ್ತವಾದ ಪುರಾವೆಗಳನ್ನೂ ಯುರೋಪಿನ ಸಂಶೋಧಕರು ಉತ್ಖನನಗಳಲ್ಲಿ ಹುಡುಕಿ ತೆಗೆದು ತೋರಿಸತೊಡಗಿದರು. ಈ ಸಿದ್ಧಾಂತವನ್ನು ಹಲವಾರು ಭಾರತೀಯರೂ ಬೆಂಬಲಿಸಿದ್ದರು. ನಾಜಿಗಳು ತಮ್ಮ ಪಂಗಡದ ಬಗ್ಗೆ ತಳೆದಿದ್ದ ಅತಿಯಾದ ಅಭಿಮಾನದಿಂದಾಗಿ ಆ ಆರ್ಯರು ಮೂಲತಃ ಜರ್ಮನ್ನರೇ ಆಗಿರಬೇಕೆಂದು ನಂಬತೊಡಗುತ್ತಾರೆ. ಎಷ್ಟರಮಟ್ಟಿಗೆ ಎಂದರೆ ತಾವು ಆರ್ಯರು ಎಂದು ತೋರಿಸಿಕೊಳ್ಳುವುದು ಪ್ರತಿಷ್ಠೆಯ ವಿಷಯವಾಗುತ್ತದೆ.

ಆದರೆ ಸಂಶೋಧನೆಗಳು ಮುಂದುವರಿದಂತೆ, ಹೊರಗಿನ ಆರ್ಯರಿಂದ ಭಾರತೀಯರ ಮೇಲೆ ನಡೆಯಿತೆನ್ನಲಾದ ಮಹಾದಾಳಿಗೆ, ಅಥವಾ ಯುದ್ಧಕ್ಕೆ ತಕ್ಕುದಾದ ಕುರುಹುಗಳು, ಅವಶ್ಯಕ ಪುರಾವೆಗಳು ಕ್ಷೀಣವಾಗತೊಡಗಿದವು. ಆರ್ಯರ ದಾಳಿಯಿಂದ ಯಾವುದೇ ಸ್ಥಳೀಯ ಜನಾಂಗ ನಾಶವಾಗಿರುವುದಕ್ಕೆ ಗಟ್ಟಿಯಾದ ಪುರಾವೆಗಳು ದೊರೆಯದಾದವು. ಮೊದಮೊದಲು ನೀಡಿದ ಪುರಾವೆಗಳು ಕೇವಲ ಊಹಾಪೋಹಗಳಾಗಿ ಕಂಡುಬಂದವು. ಆ ಇಡೀ ಬೆಳವಣಿಗೆಯು, ಸ್ವಪ್ರತಿಷ್ಠೆ ಮತ್ತು ಹಮ್ಮಿನಿಂದ ಮಂಡಿಸಲಾದ ಬೆಳೆದ ವಾದಗಳು, ಸಿದ್ಧಾಂತಗಳು ಹೇಗೆ